## ಅಬಕಾರಿ ಕಾನೂನಿನ ಜಾರಿಗೊಳಿಸುವಿಕೆ

1342 (1964) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 11.10.1999ರ ನಂತರ ಅಧೀನ ಶಾಸನ ರಚನಾ ಸಮಿತಿಯು ಸಲ್ಲಿಸಿದ ವರದಿಯಲ್ಲಿ ಎಷ್ಟು ಅಬಕಾರಿ ಕಾನೂನು ಉಲ್ಲಂಘನೆ ಪ್ರಕರಣಗಳನ್ನು ಪತ್ತೆ ಮಾಡಿದೆ?

ಆ) ಎಷ್ಟು ಪ್ರಕರಣಗಳಲ್ಲಿ ಇಲಾಖೆ ಕಾನೂನು ಕ್ರಮ ತೆಗೆದುಕೊಳ್ಳಲಾಗಿದೆ?

ಇ) ಎಷ್ಟು ಪ್ರಕರಣಗಳಲ್ಲಿ ಸಮಿತಿಯ ಸಲಹೆ ಸೂಚನೆಗಳನ್ನು ಜಾರಿಗೆ ತರಲಾಗಿದೆ?

ಈ) ಈ ಸಲಹೆಗಳನ್ನು ವ್ಯಾಪಾತ್ಮಕವಾಗಿ ಜಾರಿಗೆ ತರಲು ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು?

ಉ) ವಿಧಿಸಿರುವ ದಂಡ ಎಷ್ಟು; ವಸೂಲಾದ ಹಣ ಎಷ್ಟು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ಮಾಡಲಾಗಿದ್ದ ಒಟ್ಟು ಶಿಫಾರಸ್ಸುಗಳ ಸಂಖ್ಯೆ 14 ಆ ಪೈಕಿ ಅಬಕಾರಿ ಕಾನೂನು ಉಲ್ಲಂಘನೆಗೆ ಸಂಬಂಧಿಸಿದ ಪ್ರಕರಣಗಳು 5.

ಆ) ಎಲ್ಲಾ ಪ್ರಕರಣಗಳಲ್ಲಿ ಇಲಾಖೆಯು ಕ್ರಮ ಕೈಗೊಂಡಿದೆ.

ಇ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಈ) ಪ್ರಶ್ನೆ (ಇ) ಗೆ ನೀಡಿರುವ ವಿವರಗಳಿಂದ ಇದು ಉದ್ಭವಿಸುವುದಿಲ್ಲ.

ಉ) ವಿಧಿಸಿರುವ ದಂಡ ರೂ. 1,87,96,359/-

ವಸೂಲಾದ ಹಣ ರೂ. 1,76,51,759/-

ಬಾಕಿ ವಸೂಲಾತಿಗೆ ಕ್ರಮ ಕೈಗೊಳ್ಳಲಾಗಿದೆ.

## ಅನುಬಂಧ

ಕರ್ನಾಟಕ ವಿಧಾನ ಮಂಡಲ ಅಧೀನ ಶಾಸನ ರಚನಾ ಸಮಿತಿಯ ಶಿಫಾರಸ್ಸುಗಳ ಅನುಷ್ಠಾನದ ಬಗ್ಗೆ

27ನೇ ವರದಿ:

| ಪ್ರಶ್ನೆ ಸಂ | ಶಿಫಾರಸ್ಸು | ಇಲಾಖೆಯು ತೆಗೆದುಕೊಂಡ ಕ್ರಮ |
|---|---|---|
| 1. | ಅಧಿಸೂಚನೆ ಸಂ. ಎಫ್‌ಡಿ 8 ಪಿಇಎಸ್ 2000, ದಿನಾಂಕ 24.6.2000 ಈ ಅಧಿಸೂಚನೆಯನ್ನು 1967 ರ ಕರ್ನಾಟಕ ಅಬಕಾರಿ (ಬಾಟ್ಲಿಂಗ್ ಆಫ್ ಲಿಕ್ಕರ್) ನಿಯಮಗಳ ನಿಯಮ 5 ಕ್ಕೆ ತಿದ್ದುಪಡಿ ಮಾಡಿ ಡಿಸ್ಟಿಲರೀಸ್ ನವೀಕರಣದ ಪರವಾನಗಿ ಫೀಯನ್ನು 25 ಸಾವಿರದಿಂದ 1 ಲಕ್ಷಕ್ಕೆ ಹೆಚ್ಚಿಸಿದೆ. ಈ ರೀತಿ ಏಕಾಏಕಿ ಡಿಸ್ಟಲರೀಸ್ ನವೀಕರಣ ಫೀಯನ್ನು ಹೆಚ್ಚಿಗೆ ಮಾಡುವುದರಿಂದ ಉದ್ಯಮವನ್ನು ಏಕಸ್ವಾಮ್ಯ ಮಾಡಿಕೊಳ್ಳಲು ಕೆಲವರಿಗೆ ಅವಕಾಶ ಕಲ್ಪಿಸಿದಂತಾಗುತ್ತದೆ. ಆದುದರಿಂದ ಈ ನಿಟ್ಟಿನಲ್ಲಿ ಮರುಚಿಂತನೆ ಮಾಡಬೇಕೆಂದು ಕಾರ್ಯದರ್ಶಿ, ಆರ್ಥಿಕ ಇಲಾಖೆಯವರಿಗೆ ಸಮಿತಿ ಶಿಫಾರಸ್ಸು ಮಡುತ್ತದೆ. | ಈ ಶಿಫಾರಸ್ಸನ್ನು ಗಮನದಲ್ಲಿಟ್ಟುಕೊಂಡು ವೈನರಿ ಬಾಟ್ಲಿಂಗ್ ಲೈಸೆನ್ಸ್ ಶುಲ್ಕವನ್ನು ರೂ. 1 ಲಕ್ಷದಿಂದ ರೂ. 25,000 ಕ್ಕೆ ಇಳಿಸಲಾಗಿದೆ. |
| 2. | ಮದ್ಯದಂಗಡಿಗಳು ಪರವಾಗಿಯನ್ನು ನವೀಕರಿಸದೆ ವ್ಯವಹಾರವನ್ನು ಸ್ಥಗಿತಗೊಳಿಸಿ ಮುಂದಿನ ವರ್ಷಗಳಲ್ಲಿ ನವೀಕರಿಸಲು ಮುಂದೆ ಬಂದಾಗ ಅಂತಹವರು ಸ್ಥಗಿತಗೊಳಿಸಲಾದ ಹಿಂದಿನ ಎಲ್ಲಾ ವರ್ಷಗಳ ಶೇ. 50 ರಂತೆ ನವೀಕರಣ ಫೀಯನ್ನು ಪಾವತಿಸಿ, ಪರವಾನಗಿಯನ್ನು ನವೀಕರಿಸಲು ಅಧಿಸೂಚನೆ ಎಫ್‌ಡಿ 12 ಪಿಇಎಸ್ 2000, ದಿನಾಂಕ 24.6.2000ದಲ್ಲಿ ಅವಕಾಶ ಕಲ್ಪಿಸಲಾಗಿದೆ. | ಸ್ಥಗಿತಗೊಂಡಿರುವ ಸನ್ನದುಗಳನ್ನು ಬೇರೆಯವರಿಗೆ ಕೊಡುವುದರಿಂದ ಸರ್ಕಾರಕ್ಕೆ ಹಿಂದಿನ ವರ್ಷಗಳ ಸನ್ನದು ಶುಲ್ಕದ ಶೇ.50 ರಷ್ಟು ಬರುತ್ತಿದ್ದ ಮೊತ್ತವು ನಿಂತು ಹೋಗಿ ಸರ್ಕಾರದ ಆದಾಯಕ್ಕೆ ಧಕ್ಕೆ ಉಂಟಾಗುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ನಿಯಮಕ್ಕೆ ತಿದ್ದುಪಡಿ ತರಲಾಗಿತ್ತು. ಸ್ಥಗಿತಗೊಂಡಿರುವ ಸನ್ನದುಗಳನ್ನು ಬೇರೆಯವರಿಗೆ ನೀಡಿದರೆ ಹೊಸ ಸನ್ನದು ನೀಡಿದಂತಾಗುತ್ತದೆ. ಜನಸಂಖ್ಯೆ ಮತ್ತು ಬೇಡಿಕೆ ಆಧಾರದ ಮೇಲೆ ರಾಜ್ಯದ |

| 1 | 2 | 3 |
|---|---|---|
| | ಇದರಿಂದ ರಾಜ್ಯಕ್ಕೆ ಬರುವ ಆದಾಯ ಕಡಿಮೆಯಾಗುತ್ತದೆ. ಇದನ್ನು ತಪ್ಪಿಸಿ, ಮದ್ಯದಂಗಡಿಗಳು ಆಯಾಯ ವರ್ಷದಲ್ಲಿ ಪರವಾನಗಿಯನ್ನು ನವೀಕರಿಸದಿದ್ದ ಪಕ್ಷದಲ್ಲಿ ಅಂತಹ ಸ್ಥಳಗಳಲ್ಲಿ ಬೇರೆಯವರಿಗೆ ಪರವಾನಗಿಯನ್ನು ನೀಡುವುದು ಸೂಕ್ತ. ಈ ಬಗ್ಗೆ ಚಿಂತನೆ ಮಾಡಿ ನಿಯಮಗಳಿಗೆ ಸೂಕ್ತ ತರಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ. | ಪ್ರತಿ ತಾಲ್ಲೂಕಿನಲ್ಲಿ ನೀಡಬಹುದಾದ ಮದ್ಯದಂಗಡಿಗಳ ಸಂಖ್ಯೆಯನ್ನು (quota) ನಿಗಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ ಅಂತಹ ಕೋಟಾ ನಿಗದಿಪಡಿಸಿದ ನಂತರವೇ ಹೊಸ ಸನ್ನದುಗಳ ನೀಡುವಿಕೆ ಬಗ್ಗೆ ಪರಿಶೀಲಿಸಬೇಕೆಂದು ರಾಜ್ಯ ಉಚ್ಚ ನ್ಯಾಯಾಲಯ ನಿರ್ದೇಶನ ನೀಡಿದೆ ಆದುದರಿಂದ, ಹೊಸ ಸನ್ನದುಗಳನ್ನು ನೀಡುವ ಸಮಯದಲ್ಲಿ ಸಮಿತಿಯ ಈ ಶಿಫಾರಸ್ಸನ್ನು ಗಮನದಲ್ಲಿಟ್ಟು ಕೊಳ್ಳಲಾಗುವುದು. |
| | 28ನೇ ವರದಿ: | |
| 1. | ರಾಜ್ಯದ ಯಾವುದೇ ಹಳ್ಳಿಯಲ್ಲಿ ಸಾರಾಯಿ ಮಾರಾಟ ಮಾಡಲು ಪರವಾನಗಿಯನ್ನು ಕೊಡುವ ಮುನ್ನ ಆ ಹಳ್ಳಿಯ ವ್ಯಾಪ್ತಿಗೆ ಒಳಪಡುವ ಗ್ರಾಮ ಪಂಚಾಯತಿಯಿಂದ ಆಕ್ಷೇಪಣ ರಹಿತ ದೃಢೀಕರಣ ಪತ್ರವನ್ನು ಸಲ್ಲಿಸುವಂತೆ ಕಡ್ಡಾಯ ಮಾಡಲು ಸಂಬಂಧಿಸಿದ ನಿಯಮಗಳಿಗೆ ತಿದ್ದುಪಡಿ ತರಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ. | ಕರ್ನಾಟಕ ಪಂಚಾಯತ್ ರಾಜ್, ಅಧಿನಿಯಮ 1993 ರ ಪ್ರಕರಣ 69 ರ ಅನ್ವಯ ಗ್ರಾಮ ಪಂಚಾಯತಿಯ ಅಧಿಕಾರ ವ್ಯಾಪ್ತಿಯೊಳಗೆ ಬರುವ ಅಂಗಡಿಗಳು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಂದ ಸನ್ನದು ಪಡೆಯಬೇಕೆಂಬ ಉಪಬಂಧ ಈಗಾಗಲೇ ಇದೆ. |
| 2. | ರಾಜ್ಯದಲ್ಲಿರುವ ಫೆನ್ನಿ ಕಾರ್ಖಾನೆಗಳಲ್ಲಿ ಕೆಲವು ಪರವಾನಗಿಯಲ್ಲಿ ನೀಡಿರುವ ಷರತ್ತುಗಳನ್ನು ಪಾಲಿಸುತ್ತಿಲ್ಲ ನೀರಾದಿಂದ ಫೆನ್ನಿ ತಯಾರಿಸುವ ಬದಲು ರೆಕ್ಟಫೈಡ್ ಸ್ಪಿರಿಟ್‌ಗಳನ್ನು ಉಪಯೋಗಿಸಿ ಫೆನ್ನಿ ತಯಾರಿಸಿ ಮಾರಾಟ ಮಾಡುತ್ತಿದ್ದಾರೆ, ಅಬಕಾರಿ ಅಧಿಕಾರಿಗಳ ನಿರ್ಲಕ್ಷತನವನ್ನು ಸಮಿತಿಯು ಗಮನಿಸಿದೆ, ಈ ಹಿನ್ನೆಲೆಯಲ್ಲಿ ಪರವಾನಗಿಯಲ್ಲಿನ ಷರತ್ತುಗಳನ್ನು ಪಾಲಿಸದ ಫೆನ್ನಿ ಕಾರ್ಖಾನೆಗಳನ್ನು ಗುರುತಿಸಿ, ಕೂಡಲೇ ಪರವಾನಗಿಯನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಬೇಕೆಂದು ಹಾಗೂ ಆ ಬಗ್ಗೆ ಒಂದು ವರದಿಯನ್ನು ಸಮಿತಿಗೆ | 2002-03 ಸಾಗಿಗೆ ರಾಜ್ಯದಲ್ಲಿ ಕೇವಲ 7 ಫೆನ್ನಿ ಡಿಸ್ಟಿಲರಿಗಳು ಮಾತ್ರ ಫೆನ್ನಿ ಉತ್ಪಾದನೆ ಮತ್ತು ಬಾಟ್ಲಿಂಗ್ ಸನ್ನದು ಪಡೆದಿರುತ್ತದೆ. ಅವುಗಳ ಪೈಕಿ ಶ್ರೀ ದುರ್ಗಾ ಡಿಸ್ಟಲರಿ, ಕಾಪು ಆಗಸ್ಟ್ ತಿಂಗಳಿನಿಂದ ಕೆಲಸ ನಿರ್ವಹಿಸುತ್ತಿರುವುದಿಲ್ಲ. ಮೇಲ್ಕಂಡ ಡಿಸ್ಟಿಲರಿಗಳ ಪೈಕಿ 2 ಡಿಸ್ಟಿಲರಿಗಳು ಅನಾನಸ್‌ನಿಂದ ಫೆನ್ನಿ ಉತ್ಪಾದಿಸುತ್ತಿದ್ದು, ಉಳಿದ 5 ಘಟಕಗಳು ಫೆನ್ನಿ ಉತ್ಪಾದನೆಗೆ ಸೇಂದಿಯನ್ನು ಉಪಯೋಗಿಸುತ್ತಿವೆ. ಮಾನ್ಯ ಸಮಿತಿಯ ನಿರ್ದೇಶನದ ಪ್ರಕಾರ ಫೆನ್ನಿ ಈಟಕಗಳು ಅಸ್ತಿತ್ವದಲ್ಲಿರುವ ಜಿಲ್ಲೆಗಳ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಇವರುಗಳಿಗೆ ಪತ್ರ ಬರೆದು ಫೆನ್ನಿ ಘಟಕಗಳು |

| 1 | 2 | 3 |
|---|---|---|
| | ಮೂರು ತಿಂಗಳೊಳಗೆ ಕಳುಹಿಸಿಕೊಡಬೇಕೆಂದು ಶಿಫಾರಸ್ಸು ಮಾಡುತ್ತದೆ. | ಅನಮೋದಿತ ಕಚ್ಚಾ ವಸ್ತುವಿಗೆ ಬದಲು ರೆಕ್ಟಿಫೈಡ್ ಸ್ಪಿರಿಟ್ ಉಪಯೋಗಿಸುತ್ತಿವೆಯೇ ಎಂದು ಪರಿಶೀಲಿಸಿ ವರದಿ ಮಾಡಲು ತಿಳಿಸಲಾಯಿತು. ಇದಕ್ಕೆ ಉತ್ತರವಾಗಿ ಫೆನ್ನಿ ಘಟಕಗಳು ಅಸ್ತಿತ್ವದಲ್ಲಿರುವ ಜಿಲ್ಲೆಗಳ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಇವರು ಮಾಹಿತಿ ನೀಡಿದ್ದು ರೆಕ್ಟಿಫೈಡ್ ಸ್ಪಿರಿಟ್ ಉಪಯೋಗಿಸುತ್ತಿಲ್ಲವೆಂದಿರುತ್ತಾರೆ. ಇಂತಹಾ ಡಿಸ್ಟಿಲರಿಗಳಲ್ಲಿ ಅವ್ಯವಹಾರ ಕಂಡು ಬಂದಲ್ಲಿ ಅಬಕಾರಿ ಕಾನೂನು ಮತ್ತು ನಿಯಮಗಳಡಿಯಲ್ಲಿ ಸೂಕ್ತ ಕ್ರಮ ಕೈಕೊಳ್ಳಲಾಗುವುದು. |
| 3. | ದಿನಾಂಕ 14.2.2002 ರಂದು ಸಮಿತಿಯು ಜಾನ್ ಡಿಸ್ಟಿಲರೀಸ್ ಬೆಂಗಳೂರು ಇಲ್ಲಿಗೆ ಭೇಟಿ ನೀಡಿದಾಗ ಸದರಿ ಸಂಸ್ಥೆಯಲ್ಲಿ ವೇರ್‌ಹೌಸ್, ಬಾಟ್ಲಿಂಗ್ ಮತ್ತು ಬ್ಲೆಂಡಿಂಗ್ ಯೂನಿಟ್‌ಗಳು ಒಂದೇ ಕಡೆಯಿರುವುದನ್ನು ಗಮನಿಸಲಾಗಿದ್ದು ಭದ್ರತೆಯ ಹಾಗೂ ಅಬಕಾರಿ ಅಧೀಕ್ಷಕರ ಹತೋಟಿಯಲ್ಲಿರಬೇಕೆಂಬ ದೃಷ್ಟಿಯಿಂದ ಪ್ರತ್ಯೇಕಗೊಳಿಸುವುದು ಸೂಕ್ತವೆಂಬ ಅಭಿಪ್ರಾಯಕ್ಕೆ ಬರಲಾಗಿದ್ದು, ಆ ಹಿನ್ನೆಲೆಯಲ್ಲಿ ಸೂಕ್ತ ನಿರ್ದೇಶನವನ್ನು ಸಂಬಂಧಿಸಿದ ಸಂಸ್ಥೆಗೆ ನೀಡಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ. | ಈ ಶಿಫಾರಸ್ಸಿನಂತೆ ಸದರಿ ಸಂಸ್ಥೆಗೆ ಸೂಕ್ತ ನಿರ್ದೇಶನವನ್ನು ನೀಡಲಾಗಿದೆ. |
| 4. | ಡಿಸ್ಟಿಲರೀಸ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ಕೆಲವು ಕಡೆ ಪೊಟಾಸಿಯಂ ಪರಮಾಂಗನೇಟ್ ದ್ರಾವಣವನ್ನು ಬಾಟಲುಗಳನ್ನು ತೊಳೆಯಲು ಉಪಯೋಗಿಸದಿರುವುದನ್ನು ಗಮನಿಸಲಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಡಿಸ್ಟಲರೀಸ್ ಮತ್ತು ಬ್ರಿವರೀಸ್‌ಗಳಿಗೆ ಸುತ್ತೋಲೆ ಮೂಲಕ ಸೂಕ್ತ ನಿರ್ದೇಶನ ನೀಡಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ. | ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಗಳು 1967 ರ ನಿಯಮ 15ರ ಪ್ರಕಾರ ಶೀಷೆಗಳನ್ನು ತೊಳೆಯಲು ಪೊಟಾಸಿಯಂ ಪರಮಾಂಗನೇಟ್ ದ್ರಾವಣವನ್ನು ಉಪಯೋಗಿಸಬೇಕಿರುತ್ತದೆ ಅಥವಾ ಅಬಕಾರಿ ಆಯುಕ್ತರಿಂದ ಅನುಮೋದನೆ ಪಡೆದು ಇತರ ರಾಸಾಯನಿಕ ಉಪಯೋಗಿಸಲು ಅವಕಾಶವಿರುತ್ತದೆ. ಸಮಿತಿಯ ಶಿಫಾರಸ್ಸಿನಂತೆ |

| 1 | 2 | 3 |
|---|---|---|
| | | ಪೊಟಾಸಿಯಂ ಪರಮಾಂಗನೇಟ್ ಬಿಟ್ಟು ಬೇರೆ ಯಾವುದಾದರೂ ವಸ್ತುಗಳನ್ನು ಬಳಸುವದಾದಲ್ಲಿ ಅಬಕಾರಿ ಆಯುಕ್ತರ ಅನುಮತಿ ಪಡೆಯಬೇಕಾಗುತ್ತದೆ. ಅದರಂತೆ ಹಾಗೂ ಮಾನ್ಯ ಸಮಿತಿಯ ಶಿಫಾರಸ್ಸಿನ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಡಿಸ್ಟಿಲರಿ : ಬ್ರೀವರಿಗಳ ಅಬಕಾರಿ ಅಧಿಕಾರಿಗಳಿಗೆ ಇತರೆ ರಾಸಾಯನಿಕ ದ್ರಾವಣಗಳನ್ನು ಉಪಯೋಗಿಸುವುದಾದಲ್ಲಿ ನಿಯಮಗಳ ಪ್ರಕಾರ ಅಬಕಾರಿ ಆಯುಕ್ತರ ಪೂರ್ವಾನುಮತಿ ಪಡೆಯುವಂತೆ ಸೂಚಿಸಿ ಸುತ್ತೋಲೆ (ಸಂಖ್ಯೆ ಇಸಿಡಿ 1 ಆರ್‌ಇವಿ 2002 : 28 ನೇ ಆಶಾರಸ ದಿನಾಂಕ 16.9.2002) ನೀಡಲಾಯಿತು. ಇದಕ್ಕೆ ಉತ್ತರವಾಗಿ ಕೆಲವು ಡಿಸ್ಟಲರಿ: ಬ್ರೀವರಿಗಳು ಪೊಟಾಸಿಯಂ ಪರಮಾಂಗನೇಟ್ ಬಿಟ್ಟು ಇತರೆ ರಾಸಾಯನಿಕ ವಸ್ತುಗಳ ಬಗ್ಗೆ ತಿಳಿಸಿ ಅದಕ್ಕೆ ಅನುಮತಿ ಕೋರಿರುತ್ತಾರೆ. ಸದರಿ ಬರಲಿ ರಾಸಾಯನಿಕಗಳನ್ನು ಶುದ್ದೀಕರಣಕ್ಕೆ ಉಪಯೋಗಿಸುವುದರಿಂದ ಮದ್ಯ ಪಾನೀಯಗಳ ಮೇಲೆ ಯಾವುದಾದರೂ ಹಾನಿಕಾರಕ ಪರಿಣಾಮ ಉಂಟಾಗುವುದೇ ಹಾಗೂ ಯಾವ ಯಾವ ರಾಸಾಯನಿಕಗಳನ್ನು ಶುದ್ದೀಕರಣಕ್ಕೆ ಬಳಸಬಹುದು ಎಂದು ತಿಳಿಯುವ ಸಲುವಾಗಿ ಇಲಾಖೆಯ ಮುಖ್ಯ ರಾಸಾಯನಿಕ ತಜ್ಞರಿಂದ ವರದಿ ಪಡೆಯಲಾಗಿದೆ ಹಾಗೂ ಮೈಸೂರಿನ CFTRI ಮತ್ತು ಬೆಂಗಳೂರಿನ IIS ರವರಿಗೆ ಸಹ ಪತ್ರ ಬರೆಯಲಾಗಿದ್ದು ಮಾಹಿತಿ ನಿರೀಕ್ಷಿಸಲಾಗಿದೆ. ಮಾಹಿತಿ ಬಂದ ನಂತರ ಸೂಕ್ತ ಸುತ್ತೋಲೆ ನೀಡಲಾಗುವುದು. |

| 1 | 2 | 3 |
|---|---|---|
| 5. | ಬಾಟ್ಲಿಂಗ್ ವಿಭಾಗದಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರಿಗೆ ಕೈಗವಚ ಮತ್ತು ಸಮವಸ್ತ್ರ ಶಿರಸ್ತ್ರಾಣವನ್ನು ಒದಗಿಸಲು ನಿಯಮಗಳಲ್ಲಿದ್ದರೂ ಅನೇಕ ಡಿಸ್ಟಲರೀಸ್ ಮತ್ತು ಬ್ರಿವರೀಸ್‌ಗಳಲ್ಲಿ ಪಾಲಿಸದಿರುವುದನ್ನು ಗಮನಿಸಲಾಗಿದೆ. ಸ್ಪಿರಿಟ್‌ನಿಂದ ಮದ್ಯ ತಯಾರಿಸುವುದರಿಂದ ಅನೇಕ ಸಂದರ್ಭಗಳಲ್ಲಿ ಬಾಟಲುಗಳು ಸ್ಫೋಟಗೊಳ್ಳುವ ಸಂಭವವಿರುವುದರಿಂದ ಒಂದು ಸುತ್ತೋಲೆಯನ್ನು ಕಳುಹಿಸಿ, ಕೈಗವಚ ಮತ್ತು ಸಮವಸ್ತ್ರಗಳನ್ನು ಕಡ್ಡಾಯವಾಗಿ ಒದಗಿಸುವಂತೆ ಎಲ್ಲಾ ಡಿಸ್ಟಿಲರೀಸ್ ಮತ್ತು ಬ್ರಿವರೀಸ್‌ಗಳಿಗೆ ಸೂಚಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. | ಮಾನ್ಯ ಸಮಿತಿಯ ಶಿಫಾರಸ್ಸಿನ ಅನ್ವಯ ಬಾಟ್ಲಿಂಗ್ ವಿಭಾಗದಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರಿಗೆ ಸುರಕ್ಷತೆಯ ದೃಷ್ಟಿಯಿಂದ ಕೈಗವಚ ಹಾಗೂ ಸಮವಸ್ತ್ರ ಹಾಗೂ ಶಿರಸ್ತ್ರಾಣಗಳನ್ನು ಒದಗಿಸುವಂತೆ ಸಹಾ ಸುತ್ತೋಲೆಯಲ್ಲಿ ನಿರ್ದೇಶನ ನೀಡಲಾಗಿದೆ. (ಸುತ್ತೋಲೆ ಸಂಖ್ಯೆ : ಇಸಿಡಿ 1 ಆರ್‌ಇವಿ 2002:28 ನೇ ಆಶಾರಸ ದಿನಾಂಕ 16.9.2002) |
| 6. | ಸಮಿತಿಯು ಡಿಸ್ಟಲರಿಗಳಿಗೆ ಭೇಟಿ ನೀಡಿ ಪರಿಶೀಲಿಸಿದಾಗ, ಕೆಲವು ಡಿಸ್ಟಲರಿಗಳ ಅಧಿಕಾರಿಗಳು, ಅವರಿಗೆ ಒದಗಿಸುವ ಲೇಬಲ್ ಮತ್ತು ಸ್ಟಿಕರ್‌ಗಳು ಗುಣಮಟ್ಟ ಕಳಪೆಯಾಗಿದ್ದು, ಬಾಟಲುಗಳು ಗ್ರಾಹಕರ ಕೈ ಸೇರುವ ಮುನ್ನ ಕಿತ್ತು ಹೋಗಿರುವ ಬಗ್ಗೆ ಸಮಿತಿಯ ಗಮನಕ್ಕೆ ತರಲಾಗಿದೆ, ಈ ಹಿನ್ನೆಲೆಯಲ್ಲಿ ಒಳ್ಳೆಯ ಗುಣಮಟ್ಟದ ಲೇಬಲ್ ಮತ್ತು ಸ್ಟಿಕರ್‌ಗಳನ್ನು ಒದಗಿಸುವಂತೆ ಸಂಬಂಧಿಸಿದ ಸಂಸ್ಥೆಗೆ ಆರ್ಥಿಕ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ. | ಮಾನ್ಯ ಸಮಿತಿಯ ನಿರ್ದೇಶನದನ್ವಯ ಭದ್ರತಾ ಚೀಟಿಗಳನ್ನು ಪೂರೈಸುವ ಬೆಂಗಳೂರಿನ ಮೆ:ಎಂ.ಸಿ.ಎ. ಲಿಮಿಟೆಡ್ ಇವರಿಗೆ ಪತ್ರ ಬರೆದು ಉತ್ತಮ ಗುಣಮಟ್ಟದ ಭದ್ರತಾ ಚೀಟಿಗಳನ್ನು ಡಿಸ್ಟಿಲರಿ:ಬ್ರೀವರಿಗಳಿಗೆ ಪೂರೈಸಲು ನಿರ್ದೇಶನ ನೀಡಲಾಗಿದೆ (ಪತ್ರ ಸಂಖ್ಯೆ : ಇಸಿಡಿ 1 ಆರ್‌ಇವಿ 2002:28 ನೇ ಆಶಾರಸ ದಿನಾಂಕ 30.8.2002) ಈ ಮಾಹಿತಿಯನ್ನು ಸುತ್ತೋಲೆಯ ಮೂಲಕ ಘಟಕಗಳ ಅಬಕಾರಿ ಅಧಿಕಾರಿಗಳಿಗೆ ಸಹಾ ತಿಳಿಸಿ ಸಂಸ್ಥೆಯಿಂದ ಭದ್ರತಾ ಚೀಟಿಗಳನ್ನು ಪಡೆಯುವ ಮೊದಲು ಅವುಗಳ ಗುಣಮಟ್ಟವನ್ನು ಖಾತ್ರಿಪಡಿಸಿಕೊಳ್ಳಲು ಸೂಚಿಸಲಾಗಿದೆ. (ಸುತ್ತೋಲೆಸಂಖ್ಯೆ : ಇಸಿಡಿ ಆರ್‌ಇವಿ 2002:28 ನೇ ಆಶಾರಸ ದಿನಾಂಕ 16.9.2002)ಈ ನಿರ್ದೇಶನದ ನಂತರ ಭದ್ರತಾ ಚೀಟಿಗಳ ಗುಣಮಟ್ಟದ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ. |

| 1 | 2 | 3 |
|---|---|---|
| 7. | ಕೇಂದ್ರ ಸರ್ಕಾರದ ಸಿ.ಎಸ್.ಡಿ ಗಳಿಗೆ ಕಡಿಮೆ ತೆರಿಗೆಯನ್ನು ವಿಧಿಸಿ, ಡಿಸ್ಟಲರೀಸ್‌ಗಳಿಂದ ಮದ್ಯವನ್ನು ಒದಗಿಸುತ್ತಿದ್ದು ಅಲದಲಿ ಮದ್ಯದ ಮಾರಾಟ ಹೆಚ್ಚಾಗಿರುವುದರಿಂದ ಹಾಗೂ ರಿಯಾಯತಿ ದರದಲ್ಲಿ ಮದ್ಯ ಮಾರಾಟ ಮಾಡುತ್ತಿರುವುದರಿಂದ ರಾಜ್ಯ ಸರ್ಕಾರಕ್ಕೆ ತೆರಿಗೆಯ ನಷ್ಟ ಉಂಟಾಗಿದೆ. ಈ ನಷ್ಟವನ್ನು ಭರಿಸಲು ಕೇಂದ್ರ ಸರ್ಕಾರಕ್ಕೆ ಆರ್ಥಿಕ ಇಲಾಖೆಯ ಮೂಲಕ ಮನವಿ ಸಲ್ಲಿಸುವಂತೆ ಅಬಕಾರಿ ಇಲಾಖೆ ಆಯುಕ್ತರಿಗೆ ಸಮಿತಿ ಶಿಫಾರಸ್ಸು ಮಾಡುತ್ತದೆ. | ಕೇಂದ್ರ ಸರ್ಕಾರದ ಸಿ.ಎಸ್.ಡಿ. ಗಳಿಗೆ ಕಡಿಮೆ ತೆರಿಗೆ ವಿಧಿಸಿ ಡಿಸ್ಟಲರಿಗಳಿಂದ ಮದ್ಯವನ್ನು ಒದಗಿಸುತ್ತಿರುವ ಕ್ರಮವು ಹಿಂದಿನಿಂದಲೂ ಜಾರಿಯಲ್ಲಿದೆ. ಕರ್ನಾಟಕದಲ್ಲಿ ಮಾತ್ರವಲ್ಲದೆ ಬೇರೆ ಇತರೆ ರಾಜ್ಯಗಳಲ್ಲೂ ಸಹ ಸೈನಿಕರಿಗೆ ಒದಗಿಸುವ ಮದ್ಯವನ್ನು ಕಡಿಮೆ ತೆರಿಗೆಯ ದರದಲ್ಲಿ ನೀಡಲಾಗುತ್ತದೆ. ಅಬಕಾರಿ ತೆರಿಗೆ ಮಾತ್ರವಲ್ಲದೆ ಮಾರಾಟ ತೆರಿಗೆಯಲ್ಲೂ ಸಹ ಸೈನಿಕರಿಗೆ ಒದಗಿಸುವ ವಸ್ತುಗಳ ಮೇಲೆ ಕಡಿಮೆ ದರವನ್ನು ವಿಧಿಸಲಾಗುತ್ತದೆ. ಆದಾಗ್ಯೂ ಸಿ.ಎಸ್.ಡಿ.ಗಳಿಗೆ ರಿಯಾಯ್ತಿ ದರದಲ್ಲಿ ಮದ್ಯ ಮಾರಾಟ ಮಾಡುತ್ತಿರುವುದರಿಂದ ರಾಜ್ಯ ಸರ್ಕಾರಕ್ಕೆ ಉಂಟಾಗುವ ತೆರಿಗೆ ನಷ್ಟವನ್ನು ತಪ್ಪಿಸಲು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸುವಂತೆ ಮಾನ್ಯ ಸಮಿತಿಯ ಶಿಫರಸ್ಸಿನ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುತ್ತಿದೆ. |
| 8. | ರಾಜ್ಯಕ್ಕೆ ಹೊಂದಿಕೊಂಡಿರುವ ಇತರೆ ರಾಜ್ಯಗಳಲ್ಲಿ ಮದ್ಯದ ಮೇಲಿನ ತೆರಿಗೆ ಕಡಿಮೆಯಿರುವುದರಿಂದ ಕಳ್ಳ ಸಾಗಾಣಿಕೆ ಮೂಲಕ ರಾಜ್ಯ ಸರಹದ್ದುಗಳಲ್ಲಿ ಮದ್ಯ ತುಂಬಿದ ಕೇಸ್‌ಗಳನ್ನು ತಂದು ಮಾರಾಟ ಮಾಡುತ್ತಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಇದನ್ನು ತಪ್ಪಿಸಲು ಅಬಕಾರಿ ಇಲಾಖೆ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ. | ಕಳ್ಳ ಸಾಗಾಣಿಕೆ ಮೂಲಕ ಇತರೆ ರಾಜ್ಯಗಳಿಂದ ನಮ್ಮ ರಾಜ್ಯಕ್ಕೆ ಮದ್ಯವನ್ನು ತಂದು ಮಾರಾಟ ಮಾಡುವುದನ್ನು ತಪ್ಪಿಸುವ ದೃಷ್ಟಿಯಿಂದ ರಸ್ತೆ ಗಸ್ತುಗಳನ್ನು ನಿರಂತರವಾಗಿ ನಡೆಸಲಾಗುತ್ತಿದೆ. ರಾಜ್ಯದ ಗಡಿಗಳಲ್ಲಿ ಹಾಗೂ ಮುಖ್ಯವಾಗಿ ಹುಬ್ಬಳ್ಳಿ ನಗರದ ಸುತ್ತ ಮುತ್ತ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆ. ಮದ್ಯದ ಅಂಗಡಿಗಳನ್ನು ತಪಾಸಣೆ ಮಾಡಿ ಅಕ್ರಮ ಮದ್ಯ ಮಾರಾಟವು ಕಂಡು ಬಂದಲ್ಲಿ ಮೊಕದ್ದಮೆಗಳನ್ನು ದಾಖಲು ಮಾಡಲಾಗುತ್ತಿದೆ. 2001 02ನೇ ಆರ್ಥಿಕ ವರ್ಷದಲ್ಲಿ 28,246 ಪ್ರಕರಣಗಳನ್ನು ಅಬಕಾರಿ ಕಾಯ್ದೆಗಳ ಉಲ್ಲಂಘನೆಗಾಗಿ ದಾಖಲಿಸಲಾಗಿದೆ. 8,768 ಜನರನ್ನು ಬಂಧಿಸಲಾಗಿದೆ. 1,594 ವಾಹನಗಳನ್ನು ಜಪ್ತಿ ಮಾಡಲಾಗಿದೆ 23.19 ಲಕ್ಷ ಲೀಟರ್ ಭಾರತೀಯ ಮದ್ಯ 4.68 ಲಕ್ಷ |

| 1 | 2 | 3 |
|---|---|---|
| | | ಲೀಟರ್ ಸಾರಾಯಿ ಮತ್ತು 4.35 ಲಕ್ಷ ಲೀಟರ್ ಮದ್ಯಸಾರನ್ನು ಜಪ್ತಿ ಮಾಡಲಾಗಿದೆ. 2001 02 ನೇ ಆರ್ಥಿಕ ವರ್ಷದಲ್ಲಿ ಇಲಾಖೆಯು 64 ಕೋಟಿ ರೂಪಾಯಿಗಳನ್ನು ಮುಟ್ಟುಗೋಲು ಹಾಕಿಕೊಂಡ ವಸ್ತುಗಳನ್ನು ವಿಲೇವಾರಿ ಮಾಡುವುದರ ಮೂಲಕ ಸಂಗ್ರಹಿಸಿದೆ. ಇದು ಇತ್ತೀಚಿನ ವರ್ಷಗಳಲ್ಲಿ ಸಂಗ್ರಹಿಸಿದ ಅತ್ಯಂತ ಹೆಚ್ಚಿನ ಮೊತ್ತವಾಗಿರುತ್ತದೆ. ಇದೇ ರೀತಿ 2002-2003ನೇ ಸಾಲಿನಲ್ಲಿ ಜನವರಿ 2003 ರ ಅಂತ್ಯದ ವರೆಗೆ 17,651 ಮೊಕದ್ದಮೆಗಳನ್ನು ದಾಖಲಿಸಿ 1,180 ವಾಹನಗಳನ್ನು ವಶಪಡಿಸಿಕೊಂಡು 21.98 ಲಕ್ಷ ಲೀಟರ್ ಅಕ್ರಮ ಮದ್ಯ. 2.22 ಲಕ್ಷ ಲೀಟರ್ ಮಧ್ಯಸಾರ, 2.15 ಲಕ್ಷ ಲೀಟರ್ ಅಕ್ರಮ ಸಾರಾಯಿ ವಶಪಡಿಸಿಕೊಂಡು 5,084 ಆರೋಪಿಗಳನ್ನು ಬಂದಿಸಲಾಗಿದೆ. ಈ ರೀತಿಯ ಮುಟ್ಟುಗೋಲು ಹಾಕಿಕೊಂಡು ವಸ್ತುಗಳ ವಿಲೇವಾರಿಯಿಂದ ರೂ. 43.26 ಕೋಟಿಗಳನ್ನು ವಸೂಲಿ ಮಾಡಲಾಗಿದೆ. |
| 9. | ಅಬಕಾರಿ ಇಲಾಖೆಯಲ್ಲಿ ಸಾಕಷ್ಟು ಹುದ್ದೆಗಳು ಖಾಲಿಯಿದ್ದು ಕೆಲವಾರು ವರ್ಷಗಳಿಂದ ನೇಮಕಾತಿ ಮಾಡದಿರುವುದು ಹಾಗೂ ನಿವೃತ್ತಿಯಾದವರ ಜಾಗಕ್ಕೆ ಸೂಕ್ತ ಸಿಬ್ಬಂದಿಯನ್ನು ಒದಗಿಸದಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಅಲ್ಲದೆ ಡಿಸ್ಟಿಲರೀಸ್ ಮತ್ತು ಬಿವರೀಸ್‌ಗಳ ವೇರ್‌ಹೌಸ್‌ನಲ್ಲಿ ಅಧಿಕಾರಿಗಳು ನಿವೃತ್ತಿಯಾದಾಗ ಅವರ ಜಾಗಕ್ಕೆ ಸಿಬ್ಬಂದಿಯನ್ನು ನಿಯೋಜಿಸದಿದ್ದಲ್ಲಿ, ರಾಜ್ಯದ ಬೊಕ್ಕಸಕ್ಕೆ ನಷ್ಟವಾಗುವ ಸಂಭವವಿದೆ. ಈ ಹಿನ್ನೆಲೆಯಲ್ಲಿ ಅಗತ್ಯವಾದ ಹುದ್ದೆಗಳನ್ನು ತುಂಬಿಕೊಳ್ಳಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ. | 1968, 1969 ಮತ್ತು 1970 ನೇ ವರ್ಷಗಳಲ್ಲಿ ನೇಮಕವಾದ ಅಬಕಾರಿ ಸಿಬ್ಬಂದಿಗಳು ಒಮ್ಮೆಗೇ ನಿವೃತ್ತಿ ಹೊಂದಲು ಆರಂಭವಾದ್ದರಿಂದ ಇಲಾಖೆಯಲ್ಲಿ ಹೆಚ್ಚಿನ ಹುದ್ದೆಗಳು ಖಾಲಿಯಾಗಲು ಕಾರಣವಾಗಿರುತ್ತದೆ. ಅಲ್ಲದೆ 1975ನೇ ವರ್ಷದಿಂದ ಇಲ್ಲಿಯವರೆಗೂ ಅಬಕಾರಿ ಉಪ ನಿರೀಕ್ಷಕರು ಮತ್ತು ಅಬಕಾರಿ ನಿರೀಕ್ಷಕರ ಹುದ್ದೆಗಳಿಗೆ ನೇರ ನೇಮಕಾತಿ ಆಗಿರುವುದಿಲ್ಲ. ಎಂದರೆ 27 ವರ್ಷಗಳಿಗಿಂತಲೂ ಹೆಚ್ಚು ವರ್ಷಗಳಿಂದ ನೇರ ನೇಮಕಾತಿಯಾಗಿರುವುದು ಇಲಾಖೆಯಲ್ಲಿ ಹೆಚ್ಚಿನ ಹುದ್ದೆಗಳು ಖಾಲಿ ಬೀಳಲು ಕಾರಣವಾಗಿರುತ್ತದೆ. ಈಗ 254 ಅಬಕಾರಿ ಉಪ ನಿರೀಕ್ಷರುಗಳ ಹುದ್ದೆಯನ್ನು ಭರ್ತಿ ಮಾಡಲು ಕರ್ನಾಟಕ ಲೋಕಾಸೇವಾ ಆಯೋಗದ ಮುಖಾಂತರ |

| 1 | 2 | 3 |
|---|---|---|
| | | ಕ್ರಮ ತೆಗೆದುಕೊಳ್ಳಲಾಗಿದೆ. ಮೇಲೆ ತಿಳಿಸಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಹುದ್ದೆಗಳು ಖಾಲಿ ಇದ್ದಾಗ್ಯೂ ಸಹ ಸರ್ಕಾರದ ಡಿಸ್ಪಲರಿಗಳು ಮತ್ತು ಬ್ರೀವರಿಗಳ ವೇರ್‌ಹೌಸ್‌ನಲ್ಲಿ ಅಧಿಕಾರಿಗಳು ನಿವೃತ್ತಿಯಾದಾಗ ಅವರ ಜಾಗಕ್ಕೆ ರಾಜ್ಯದ ಬೊಕ್ಕಸಕ್ಕೆ ನಷ್ಟವಾಗುವುದನ್ನು ತಪ್ಪಿಸುವ ಉದ್ದೇಶದಿಂದ ಆದ್ಯತೆ ಮೇರೆಗೆ ಸದರಿ ಹುದ್ದೆಗಳಿಗೆ ಅಧಿಕಾರಿಗಳನ್ನು ನಿಯೋಜನೆ ಮಾಡಲು ಅಥವಾ ಅಧಿಕ ಪ್ರಭಾರದ ಮೇಲೆ ನಿಯೋಜಿಸುವ ಮೂಲಕ ಸಹ ಅಧಿಕಾರಿಗಳನ್ನು ನೇಮಿಸಲಾಗುತ್ತಿದೆ. ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆ ಮುಗಿದು ಆಖೈರಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ನೇಮಕ ಮಾಡಿದ ನಂತರ ಡಿಸ್ಟಿಲರಿ ಬ್ರೀವರಿಗಳಲ್ಲಿರುವ ಎಲ್ಲಾ ಹುದ್ದೆಗಳನ್ನು ಪೂರ್ಣಾವಧಿಯ ಅಧಿಕಾರಿಗಳಿಂದ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. |
| 10. | ರಾಜ್ಯದ ಎಲ್ಲಾ ಡಿಸ್ಟಿಲರೀಸ್ ಮತ್ತು ಬ್ರಿವರೀಸ್‌ಗಳಲ್ಲಿ ಕೆಲಸ ನಿರ್ವಹಿಸುವ ಅಬಕಾರಿ ವೇರ್‌ಹೌಸ್ ಕೀಪರ್ ಮತ್ತು ಸೂಪರಿಂಟೆಂಡೆಂಡ್‌ರವರಿಗೆ ಸ್ಥಳೀಯವಾಗಿ ಸೂಕ್ತ ವಸತಿಗೃಹ. ದೂರವಾಣಿಯನ್ನು ಕಡ್ಡಾಯವಾಗಿ ಒದಗಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಒಂದು ವರದಿಯನ್ನು ಕಳುಹಿಸಿಕೊಡಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ. | ರಾಜ್ಯದ ಡಿಸ್ಟಿಲರಿ ಬ್ರೀವರಿಗಳಲ್ಲಿ ಕಾರ್ಯನಿರ್ವಹಿಸುವ ಅಬಕಾರಿ ಸಿಬ್ಬಂದಿಗೆ ಸ್ಥಳೀಯವಾಗಿ ಸೂಕ್ತ ವಸತಿಗೃಹ ನೀಡುವಂತೆ ಹಾಗೂ ಘಟಕಗಳ ಅಬಕಾರಿ ಕಛೇರಿಗೆ ದೂರವಾಣಿ ಸಂಪರ್ಕವನ್ನು ಕಡ್ಡಾಯವಾಗಿ ಒದಗಿಸುವಂತೆ ಸುತ್ತೋಲೆ ಸಂಖ್ಯೆ ಇಸಿಡಿ 1 ಆರ್‌ಇವಿ 2002:2:28ನೇ ಆಶಾರಸ ದಿನಾಂಕ 18.9.2002 ರಲ್ಲಿ ನಿರ್ದೇಶನ ನೀಡಲಾಗಿದೆ ಹಾಗೂ ಈ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲು ಅಬಕಾರಿ ಅಧಿಕಾರಿಗಳಿಗೆ ಸೂಚಿಸಲಾಗಿದೆ. |
| 11. | ಮದ್ಯದಂಗಡಿಗಳಲ್ಲಿ ಮದ್ಯವನ್ನು ಚಿಲ್ಲರೆಯಾಗಿ ಮಾರಾಟ ಮಾಡುವ ಹಾಗಿಲ್ಲ ಹಾಗೂ ಅಂಗಡಿಯಲ್ಲಿ ಮದ್ಯ ಸೇವಿಸಲು | ಈ ಬಗ್ಗೆ ಮಾನ್ಯ ಸಮಿತಿಯ ಶಿಫಾರಸಿನಂತೆ ಬೆಂಗಳೂರು ನಗರ ಹಾಗೂ ಇತರ ಕಡೆಗಳಲ್ಲಿ ಚಿಲ್ಲರೆಯಾಗಿ ಮದ್ಯ ಮಾರಾಟ ಮಾಡುವ ಅಂಗಡಿಗಳಲ್ಲಿ |

| 1 | 2 | 3 |
|---|---|---|
| | ಅವಕಾಶ ನೀಡುವಂತಿಲ್ಲ, ಆದರೆ, ಅಂಗಡಿಗಳಲ್ಲಿ ಯಾವ ಅಡೆತಡೆಯಿಲ್ಲದೆ ಚಿಲ್ಲರೆ ಮಾರಾಟ ಮತ್ತು ಮದ್ಯ ಸೇವಿಸುವುದು ನಿರಾಳವಾಗಿ ನಡೆಯುತ್ತಿದೆ. ಈ ಬಗ್ಗೆ ಅಬಕಾರಿ ಅಧಿಕಾರಿಗಳು ಪರಿಶೀಲಿಸಿ ಸಮಿತಿಗೆ ವರದಿ ಮಾಡುವಂತೆ ಸೂಕ್ತ ನಿರ್ದೇಶನ ನೀಡಬೇಕೆಂದು ಆರ್ಥಿಕ ಇಲಾಖೆಯ ಕಾರ್ಯದರ್ಶಿಯವರಿಗೆ ಶಿಫಾರಸ್ಸು ಮಾಡುತ್ತದೆ. ಬೆಂಗಳೂರಿನ ಸುತ್ತಮುತ್ತಲಿನ ಡಿಸ್ಟಲರೀಸ್ ಮತ್ತು ಬ್ರೀವರೀಸ್ ಗಳಿಗೆ ಅಬಕಾರಿ ಆಯುಕ್ತರು ಕನಿಷ್ಠ ಪಕ್ಷ ಒಂದು ಅಥವಾ ಎರಡು ತಿಂಗಳಿಗೊಮ್ಮೆ ಅನಿರೀಕ್ಷಿತ ಭೇಟಿ ನೀಡಿ ಬಾಟಲಿಗಳ ಸ್ವಚ್ಛತೆಯನ್ನು ನಿಯಮಾನುಸಾರ ಮಾಡುತ್ತಿದ್ದಾರೆಯೇ ಇಲ್ಲವೆ ಎಂದು ಪರೀಕ್ಷೆ ಮಾಡಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ. | ಮದ್ಯ ಸೇವಿಸಲು ಅವಕಾಶ ನೀಡದಂತೆ ಕ್ರಮ ತೆಗೆದುಕೊಳ್ಳಲು ಅಬಕಾರಿ ಡೆಪ್ಯೂಟಿ ಕಮೀಷನರ್‌ಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿರುತ್ತದೆ. ಬೆಂಗಳೂರು ನಗರ ಗ್ರಾಮಾಂತರ ಪ್ರದೇಶಗಳಲ್ಲಿ ಜುಲೈ 2002 ರಿಂದ 450ಕ್ಕೂ ಹೆಚ್ಚು ಚಿಲ್ಲರೆಯಾಗಿ ಮದ್ಯ ಮಾರಾಟ ಮಾಡುವ ಅಂಗಡಿಗಳ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಿದ್ದು ಸನ್ನದುದಾರರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ.<br><br>ಸಮಿತಿಯು ಶಿಫಾರಸ್ಸಿನ ಅನ್ವಯ ಅಬಕಾರಿ ಆಯುಕ್ತರು ಬೆಂಗಳೂರಿನ ಸುತ್ತಮುತ್ತಲಿನ ಈ ಕೆಳಗಿನ ಕೆಲವು ಡಿಸ್ಟಲರಿ : ಬ್ರೀವರಿಗಳಿಗೆ ಮಿದ್ದಾಗಿ ಭೇಟಿ ನೀಡಿ ಪರಿಶೀಲಿಸಿರುತ್ತಾರೆ.<br>1. ಕರ್ನಾಟಕ ಬ್ರೀವರಿ ಮತ್ತು ಡಿಸ್ಟಲರೀಸ್ ಪ್ರೈ ಲಿ., 20ನೇ ಮೈಲಿ, ತುಮಕೂರು ರಸ್ತೆ ಬೆಂಗಳೂರು ಗ್ರಾಮಾಂತರ ಜಿಲ್ಲೆ<br>2. ಮೆ: ಜೆ.ಪಿ.ಡಿಸ್ಟಿಲರೀಸ್ ಪ್ರೈ ಲಿ., ಮಾಕಳಿ ಗ್ರಾಮ, ಬೆಂಗಳೂರು.<br>3. ಮೆ: ಅಮೈತ್ ಡಿಸ್ಟಲರೀಸ್ ಲಿ., ಕಂಬೀಪುರ, ಬೆಂಗಳೂರು74<br>4. ಮೆ: ಮ್ಯಾಕ್‌ಡೊವೆಲ್ ಅಂಡ್ ಕಂಪನಿ ಲಿ., ಕುಂಬಳಗೂಡು, ಬೆಂಗಳೂರು 74<br>ಮಾನ್ಯ ಸಮಿತಿಯ ಸೂಚನೆಯನ್ನು ಗಮನದಲ್ಲಿಟ್ಟುಕೊಂಡು ಇನ್ನು ಮುಂದೆಯೂ ಸಹ ಡಿಸ್ಟಿಲರಿ:ಬ್ರೀವರಿಗಳಿಗೆ ಅನಿರೀಕ್ಷಿತ ಭೇಟಿ ನೀಡಲಾಯಿತು. |